## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ

**ಸ್ಪೆಶಲ್ (Corruption)ಕೇಸ್ ನಂ.7/2021**

**ಪಿಡಬ್ಲ್ಯೂ- 05(ಸಿಡಬ್ಲ್ಯೂ-18)**

ಸಾಕ್ಷಿದಾರರ ಹೆಸರು : ಪ್ರಭಾಕರ ಚೀನಿ
ತಂದೆ/ಗಂಡನ ಹೆಸರು: ಹನಮಂತಪ್ಪ
ವಯಸ್ಸು : **63** ವರ್ಷ
ಉದ್ಯೋಗ : ನಿವೃತ್ತ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ.
ವಾಸಸ್ಥಳ : ಬೆಂಗಳೂರು

**ಸಾಕ್ಷಿಗೆ ಇಂದು ದಿನಾಂಕ :- 24/01/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ನಾನು ದಿ:17.07.2020 ರಿಂದ ದಿ: 31.10.2021 ರವರೆಗೆ ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಎಂದು ಸೇವೆ ಸಲ್ಲಿಸಿದ್ದೇನೆ.

2. ದಿ: 06.01.2021 ರಂದು ನಮ್ಮ ಕಚೇರಿಗೆ ಮಹಾ ವ್ಯವಸ್ಥಾಪಕರು ಪುನರ ವಸತಿ ಮತ್ತು ಪುನರ ಕೇಂದ್ರ ಹಾಗೂ ಭೂಸ್ವಾಧೀನ ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟ ರವರಿಂದ ಒಂದು ಪತ್ರ ಬಂದಿದ್ದು, ಅದರಲ್ಲಿ ಆರೋಪಿ ಬಸವರಾಜ ಎಂಬುವವರ ಮೇಲೆ ಭ್ರಷ್ಟಾಚಾರ ನಿಗ್ರಹ ದಳದವರು, ಭ್ರಷ್ಟಚಾರ ಪ್ರತಿಬಂಧಕ ಕಾಯ್ದೆ 7(ಎ)ರಲ್ಲಿ ಪ್ರಕರಣ ದಾಖಲಾಗಿದ್ದು ನಿಮ್ಮ ಕಾರ್ಮಿಕನಾಗಿದ್ದು ಅವರು ಮಹಾ ವ್ಯವಸ್ಥಾಪಕರು ಪುನರ ವಸತಿ ಮತ್ತು ಪುನರ ಕೇಂದ್ರ ಹಾಗೂ ಭೂಸ್ವಾಧೀನ ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟನಲ್ಲಿ ನಿಯೋಜನೆ ಮೇಲೆ ಪ್ರಥಮ ದರ್ಜೆ ಕಂದಾಯ ನಿರಿಕ್ಷಕರು ಎಂದು ಕರ್ತವ್ಯ ಮಾಡುತ್ತಿದ್ದು ಅವರ ಬಗ್ಗೆ ಅಭಿಯೋಜನಾ ಮಂಜೂರಾತಿ ನೀಡಲು ಕೇಳಿಕೊಂಡಿದ್ದರು. ಆ ಪತ್ರದೊಂದಿಗೆ ಪಿರ್ಯಾದಿ, ಸಾಕ್ಷಿದಾರರ ಹೇಳಿಕೆ, ಪಂಚನಾಮೆ, ಚಾರ್ಜ ಸೀಟು ಹಾಗೂ ದಾಖಲೆಗಳನ್ನು ಕಳಿಸಿದ್ದರು.

ನಾನು ಆ ರೀತಿ ಪತ್ರ ಬಂದ ನಂತರ ಆ ಪತ್ರದೊಂದಿಗೆ ಇದ್ದ ಎಲ್ಲ ದಾಖಲೆಗಳನ್ನು ಪರಿಶೀಲಿಸಲಾಗಿ, ನನಗೆ ಆರೋಪಿ ಬಸವರಾಜ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲು ಸೂಕ್ತ ಪ್ರಕರಣವಾಗಿದೆ ಎಂದು ಅನ್ನಿಸಿದ್ದರಿಂದ ನಾನು ಅಭಿಯೋಜನಾ ಮಂಜೂರಾತಿಯನ್ನು ದಿ: 25.01.2021 ರಂದು ನೀಡಿರುತ್ತೇನೆ. ಅದನ್ನು ನೋಡುತ್ತಿದ್ದೇನೆ ಅದನ್ನು ನಿ.ಪಿ.9 ಎಂದು ಹಾಗೂ ಸಾಕ್ಷಿಯ ರುಜು ನಿ.ಪಿ.9(ಎ) ಎಂದು ಗುರುತಿಸಲಾಯಿತು. ಆರೋಪಿ ಆ ಸಮಯದಲ್ಲಿ ಪ್ರಥಮ ದರ್ಜೆ ಕಂದಾಯ ನಿರಿಕ್ಷಕರು ಆಗಿದ್ದು, ಆತನ ಸಕ್ಷಮ ಅಧಿಕಾರಿ ನಾನೇ ಆಗಿದ್ದೆ.

**ಪಾಟೀ ಸವಾಲು:- ಶ್ರೀ ಜಿ.ಎ.ಎ. ವಕೀಲರಿಂದ ಆರೋಪಿ ಪರಃ**

3. ನಮ್ಮ ನಿಗಮದಲ್ಲಿ ನಿಗಮ ಸದಸ್ಯರು 18 ಇರಬಹುದು ಈಗ ನನಗೆ ಅಷ್ಟು ನೆನಪಿಲ್ಲ. ನನ್ನನ್ನು ಆ ನಿಗಮದ ನಿರ್ದೇಶಕರು ಎಂದು ಸರಕಾರದವರು ನೇಮಿಸಿದ್ದು, ಅದನ್ನು ನಿಗಮ ಬೋರ್ಡ ಅನುಮೋದನೆ ನೀಡಿತ್ತು. ನಿ.ಪಿ.9 ರಲ್ಲಿ ಉಲ್ಲೇಖಿಸಲಾದ 4 ಉಲ್ಲೇಖ ಪತ್ರದಲ್ಲಿ ಎಡಿಜಿಪಿ ಲೋಕಾಯುಕ್ತ ಕಚೇರಿಯಿಂದ ದಾಖಲೆಗಳು ಬಂದ ಬಗ್ಗೆ ಉಲ್ಲೇಖಿಸಲಾಗಿಲ್ಲ ಎಂದರೆ ಸರಿ. ನಿ.ಪಿ.9 ರಲ್ಲಿ 2 ನೇ ಪುಟದಲ್ಲಿ ಆದೇಶಕ್ಕಿಂತ ಪೂರ್ವದಲ್ಲಿ ಇರುವ ಖಂಡಿಕೆಯಲ್ಲಿ ದಾಖಲೆಗಳು ಪುಟ ಸಂಖ್ಯೆ 1 ರಿಂದ 184 ರವರೆಗೆ ಲಗತ್ತಿಸಿ ಅಭಿಯೋಜನಾ ಮಂಜೂರಾತಿ ನೀಡಲು ಕೋರಿರುತ್ತಾರೆ ಎಂದು ಬರೆಯಲಾಗಿದ್ದು, ಆ ದಾಖಲೆ ಯಾವ ಯಾವ ದಾಖಲೆ ಎಂದು ಪ್ರತ್ಯೇಕವಾಗಿ ಬರೆಯಲಾಗಿಲ್ಲ ಎಂದರೆ ಸರಿ. ನೀವು ಕೋರಿರುವ ಮೇರೆಗೆ ಆದೇಶ ಮಾಡಿರುತ್ತಿರಿ ಎಂಬ ಪ್ರಶ್ನೆಗೆ ಸಾಕ್ಷಿ ದಾಖಲೆಗಳನ್ನು ಪರಿಶೀಲಿಸಿ ಆದೇಶ ಮಾಡಿರುತ್ತೇನೆ ಎಂದು ಹೇಳುತ್ತಾರೆ.

ನಾನು ಆರೋಪಿ ಬಗ್ಗೆ ಅಭಿಯೋಜನಾ ಮಂಜೂರಾತಿ ನೀಡಲು ಸಕ್ಷಮ ವ್ಯಕ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಅಭಿಯೋಜನಾ ಮಂಜೂರಾತಿ ನೀಡಲು ನಿಗಮ ಸಕ್ಷಮ ಪ್ರಾಧಿಕಾರವಾಗಿರುತ್ತದೆ ಎಂದರೆ ಸರಿಯಲ್ಲ. ನೀವು ಆರೋಪಿ ಬಗ್ಗೆ ಅಭಿಯೋಜನಾ ಮಂಜೂರಾತಿ ಕುರಿತು ಬಂದ ದಾಖಲೆಗಳನ್ನು ಹಾಗೂ ಪತ್ರ ಬೋರ್ಡಿನ ಮುಂದೆ ಇಟ್ಟು, ಮಂಜುರಾತಿ ಪಡೆದುಕೊಂಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಬೋರ್ಡ ನಡುವಳಿಕೆಯಲ್ಲಿ ಆ ರೀತಿ ಅಭಿಯೊಜನಾ ಮಂಜೂರಾತಿ ನೀಡಲು ವ್ಯವಸ್ಥಾಪಕ ನಿರ್ದೇಶಕರಿಗೆ ನಿಗಮ ಅನುಮತಿ ನೀಡಿದ್ದು ಆ ಬಗ್ಗೆ ಜನರಲ್ ಪ್ರೊಸಿಡಿಂಗ್ ನಲ್ಲಿ ನಮೂದಾಗಿದೆ ಎಂದು ಹೇಳುತ್ತಾರೆ. ನಾನು ನಿ.ಪಿ.9 ರಲ್ಲಿ ಯಾವ ದಿನಾಂಕದಂದು ಮಾಡಿದ ನಡುವಳಿಗೆ ಪ್ರಕಾರ ವ್ಯವಸ್ಥಾಪಕರ ನಿರ್ದೇಶಕರಿಗೆ ಅಭಿಯೋಜನಾ ಮಂಜೂರಾತಿ ನೀಡಲು ಅಧಿಕಾರ ಇದೆ ಎಂಬುವುದು ಬರೆದಿರುವುದಿಲ್ಲ ಎಂದರೆ ಸರಿ. ನಾನು ಆರೋಪಿ ಬಗ್ಗೆ ಅಭಿಯೋಜನಾ ಮಂಜೂರಾತಿ ನೀಡಲು ಸಕ್ಷಮ ಪ್ರಾಧಿಕಾರ ವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲಾತಿ ಪರಿಶೀಲಿಸದೆ ಯಾಂತ್ರಿಕವಾಗಿ ಅಭಿಯೋಜನಾ ಮಂಜೂರಾತಿ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.